# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

| Vol.48 | ENGLISH DAILY | Subscription Yearly - Rs. - | THURSDAY | 16-6-2022 |
|---|---|---|---|---|



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಜೋಳ ದರ ಸ್ಥಿರ

ದೇಶೀ ಮಾರುಕಟ್ಟೆಯಲ್ಲಿ ಬೇಡಿಕೆ ಹಾಗೂ ಪೂರೈಕೆ ಸ್ಥಿರವಿದ್ದು, ಜೋಳ ದರ ಸ್ಥಿರವಿದೆ. ಗೋಧಿ ದರ ಸ್ವಲ್ಪ ಮಟ್ಟಿನ ಇಳಿಕೆ ಕಂಡಿದೆ. ಚಿಕಾಗೋ ಮಾರುಕಟ್ಟೆಯಲ್ಲಿ ಜೋಳ, ಗೋಧಿ ದರಗಳು ಇಳಿಕೆಯಾಗಿದೆ, ಆದರೆ ಉಕ್ರೈನ್‌ನ ಉತ್ಪಾದನೆ ಇಳಿಕೆಯ ನಿರೀಕ್ಷೆಯಿಂದ ದರ ಇಳಿಕೆ ಸೀಮಿತವಾಗಿದೆಯೆನ್ನಲಾಗಿದೆ.

## ದೇಶೀ ಮಾರುಕಟ್ಟೆಯಲ್ಲಿ ಸೋಯಾಬೀನ್ ದರ ಇಳಿಕೆ ಸಾಧ್ಯತೆ

ಸರಕಾರದ ಖಾದ್ಯತೈಲ ಆಮದು ತೆರಿಗೆ ನೀತಿಯಿಂದ ಮುಂಬರುವ ದಿನಗಳಲ್ಲಿ ದೇಶೀ ಮಾರುಕಟ್ಟೆಯಲ್ಲಿ ಸೋಯಾಬೀನ್ ದರ ಇಳಿಕೆ ಸಾಧ್ಯತೆಯಿದೆಯೆಂದು ವಿಶ್ಲೇಷಕರ, ಪರಿಣತಿದಾರರ ಅಭಿಪ್ರಾಯವಾಗಿದೆ. ಹಿಂದಿನ ಕೆಲವು ದಿನಗಳಿಂದ ಇಂದೋರ್ ಮಾರುಕಟ್ಟೆಯಲ್ಲಿ ಸೋಯಾಬೀನ್ ದರ ಇಳಿಕೆಯಾಗುತ್ತಿದ್ದು 4 ತಿಂಗಳ ಕನಿಷ್ಠ ಮಟ್ಟಕ್ಕೇಳಿದಿದೆ. ಕಚ್ಚಾ ಪಾಮೆಣ್ಣೆ, ಕಚ್ಚಾ ಸೋಯಾಬೀನ್ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆಗಳ ಹೆಚ್ಚಿನ ಆಮದಿನಿಂದ ದೇಶೀ ಸೋಯಾಬೀನ್ ದರ ಇಳಿಕೆಯಾಗಬಹುದೆನ್ನಲಾಗಿದೆ.